# ಸೆಲೆಬ್ರಿಟಿ

■ ಹನಿ

## ಆಶಾ ದೀದಿಯ ಆತ್ಮಕಥೆ

ಎಂಟು ದಶಕಗಳಿಂದ ಹಾಡುತ್ತಿರುವ ಆಶಾ ಭೋಂಸ್ಲೆ ತಮ್ಮ ವೃತ್ತಿಜೀವನದಲ್ಲಿ ಸಾಕಷ್ಟು ಏಳುಬೀಳುಗಳನ್ನು ಕಂಡಿದ್ದಾರೆ. ಅವರ ವೈಯಕ್ತಿಕ ಜೀವನದಲ್ಲೂ ಹಲವು ಅಚ್ಚರಿಗಳಿವೆ. ಈಗ ಅವೆಲ್ಲವೂ ಬರಹರೂಪಕ್ಕೆ ಇಳಿದಿದ್ದು ಆತ್ಮಕಥೆಯ ಪುಸ್ತಕ ಶೀಘ್ರ ಹೊರಬರಲಿದೆ ಎನ್ನುವುದು ಬಾಲಿವುಡ್‌ನ ದೊಡ್ಡ ಸುದ್ದಿ.

ಆಶಾ ದೀದಿ ಬರಹಗಾರ್ತಿಯಲ್ಲ. ಆದರೆ ಕಳೆದ ಕೆಲವು ವರ್ಷಗಳಿಂದ ಪ್ರತಿದಿನ ರಾತ್ರಿ ಕುಳಿತು ತಮ್ಮ ಹಳೆಯ ನೆನಪುಗಳನ್ನು ಬರೆಯುತ್ತಿದ್ದಾರಂತೆ. ಈ ಡೈರಿ ಪುಟಗಳೇ ಆತ್ಮಕಥೆಯಾಗಿ ಹೊರಬರಲಿದೆಯಂತೆ. ಆಕೆಯ ನೆನಪುಗಳಲ್ಲಿ ಅಕ್ಕ ಲತಾ ಮಂಗೇಶ್ಕರ್, ಗಂಡ ಆರ್.ಡಿ.ಬರ್ಮನ್, ಮಕ್ಕಳಾದ ಹೇಮಂತ್, ವರ್ಷಾ ಮತ್ತು ಆನಂದ್‌ರ ಬಗ್ಗೆಯೂ ಸಾಕಷ್ಟು ಕುತೂಹಲಕರ ವಿವರಗಳಿವೆಯಂತೆ. ಎಲ್ಲಕ್ಕಿಂತ



ಮುಖ್ಯವಾಗಿ ತಮ್ಮ ಅಡುಗೆ ಪ್ರೀತಿಯ ಬಗ್ಗೆಯೂ ಆಶಾ ಬರೆದಿದ್ದಾರಂತೆ. ಆಶಾ ದೀದಿಯ ಬರವಣಿಗೆ ಅಡ್ಡಾದಿಡ್ಡಿ ಇರುವುದರಿಂದ ಅದಕ್ಕೆ ಆತ್ಮಕಥೆಯ ರೂಪ ಕೊಡಲು ವಾಷಿಂಗ್ಟನ್ನಿನ ಪ್ರೊಫೆಸರ್ ಒಬ್ಬರು ಯತ್ನಿಸುತ್ತಿದ್ದಾರಂತೆ. ಆತನಿಗೆ ಹಿಂದಿ, ಮರಾಠಿ ಮತ್ತು ಇಂಗ್ಲಿಷ್ ಮೂರೂ ಭಾಷೆಗಳು ಚೆನ್ನಾಗಿ ಗೊತ್ತಿದ್ದು ಸಂಗೀತದ ಬಗ್ಗೆಯೂ ಸಾಕಷ್ಟು ಜ್ಞಾನ ಇದೆಯಂತೆ.

ಒಂದು ಸಾವಿರಕ್ಕೂ ಹೆಚ್ಚು ಸಿನಿಮಾಗಳಿಗೆ ಹಾಡಿರುವ ಆಶಾಜೀ, 20ಕ್ಕೂ ಹೆಚ್ಚು ಭಾಷೆಗಳಲ್ಲಿ 12 ಸಾವಿರಕ್ಕೂ ಹೆಚ್ಚು ಹಾಡುಗಳನ್ನು ರೆಕಾರ್ಡ್ ಮಾಡಿ ಗಿನ್ನೆಸ್ ದಾಖಲೆಯನ್ನೇ ಸೃಷ್ಟಿಸಿದ್ದಾರೆ. ಹೀಗಾಗಿ ಅವರಲ್ಲಿ ನೆನಪುಗಳ ಅಗಾಧ ಸಾಗರವೇ ಇರುವಂತಿದೆ. ಆ ನೆನಪುಗಳ ಜತೆ ಬಾಲಿವುಡ್‌ನ ಸಾಕಷ್ಟು ರೋಚಕ ಸಂಗತಿಗಳೂ ಬಿಚ್ಚಿಕೊಳ್ಳಲಿವೆ.



## ಮರಳಿ ಸಿನಿಮಾ!

ತೆಲುಗು ಚಿತ್ರರಂಗದಲ್ಲಿ ಎನ್‌ಟಿಆರ್ ಬಿಟ್ಟರೆ ಅತ್ಯಂತ ಹೆಚ್ಚು ಅಭಿಮಾನಿಗಳನ್ನು ಹೊಂದಿದ್ದ ನಟ ಕೊನಿಡಾಲ ಶಿವಶಂಕರ ವರಪ್ರಸಾದ್ ಯಾನೆ ಚಿರಂಜೀವಿ. ನಟನೆಯ ಉತ್ತುಂಗ ಕಾಲದಲ್ಲಿ (90ರ ದಶಕ) ಚಿರಂಜೀವಿ ಅಬ್ಬರ ಎಷ್ಟಿತ್ತೆಂದರೆ, 'ಘರಾನಾ ಮೊಗುಡು' ಚಿತ್ರ ಬಾಕ್ಸಾಫೀಸ್ ನಲ್ಲಿ 10 ಕೋಟಿ ರೂಪಾಯಿ ಬಾಚಿಕೊಂಡದ್ದು ಟಾಲಿವುಡ್ ಮಟ್ಟಿಗೆ ಆ ಕಾಲದ ಹೊಸ ದಾಖಲೆ. 1992ರ ಹೊತ್ತಿಗೇ 1.25 ಕೋಟಿ ರೂಪಾಯಿ ಸಂಭಾವನೆ ಪಡೆದೂ ದಾಖಲೆ ನಿರ್ಮಿಸಿದ್ದವರು ಚಿರಂಜೀವಿ. ಅಮಿತಾಭ್ ಬಚ್ಚನ್‌ಗಿಂತಲೂ ದೊಡ್ಡ ಮೆಗಾಸ್ಟಾರ್ ಎಂಬ ಬಿರುದೂ ಆಗ ಚಿರಂಜೀವಿಗೆ ದಕ್ಕಿತ್ತು.

ಆದರೆ ರಾಜಕೀಯಕ್ಕೆ ಕಾಲಿಟ್ಟು ಚಿರಂಜೀವಿ ಎಂಬ ಸಿನಿಮಾ ತಾರೆಯ ಭವಿಷ್ಯ ಛಿದ್ರವಾಯಿತು ಎನ್ನುವವರ ಸಂಖ್ಯೆ ಈಗ ಹೆಚ್ಚಿದೆ. ಪ್ರಜಾರಾಜ್ಯಂ ಪಕ್ಷ ಕಟ್ಟಿದ ಚಿರಂಜೀವಿ, ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಬಲ ಪ್ರದರ್ಶನವನ್ನು ಯಶಸ್ವಿಯಾಗಿಯೇ ಮಾಡಿದ್ದರು. ಆದರೆ ಕೆಲವೇ ವರ್ಷಗಳಲ್ಲಿ ಕಾಂಗ್ರೆಸ್ ಜತೆ ಪಕ್ಷ ವಿಲೀನಗೊಳಿಸಿದರು. ಇದೀಗ ಮುಗಿದ ಲೋಕಸಭಾ ಚುನಾವಣೆಯಲ್ಲಿ ಚಿರು ನೇತೃತ್ವದ ಕಾಂಗ್ರೆಸ್ ಒಂದೇ ಒಂದು ಅಸೆಂಬ್ಲಿ ಸೀಟನ್ನೂ ಗಳಿಸದೆ ನೆಲ ಕಚ್ಚಿದ ಬಳಿಕ ಚರಿತ್ರೆ ಒಂದು ಸುತ್ತು ಬಂದು ನಿಂತಿದೆ. ರಾಜ್ಯಸಭಾ ಸದಸ್ಯರಾಗಿ, ಕೇಂದ್ರ ಸಚಿವ ಸಂಪುಟದಲ್ಲಿ ಪ್ರವಾಸೋದ್ಯಮ ಸಚಿವರೂ ಆಗಿದ್ದ ಚಿರಂಜೀವಿ, ಮತ್ತೆ ಸಿನಿಮಾಕ್ಕೆ ಮರಳಲು ಇದು ಸಕಾಲ ಎನ್ನುವುದು ಅಭಿಮಾನಿಗಳ ಒತ್ತಾಯವೂ ಹೌದು.

ಹಾಗೆಂದೇ ಚಿರು ಸಿನಿಮಾ ಮರುಪ್ರವೇಶಕ್ಕೆ ವೇದಿಕೆ ಸಿದ್ಧವಾಗಿದೆ. ಕಳೆದ ಏಳು ವರ್ಷಗಳಿಂದ ಚಿರು ಸಿನಿಮಾಕ್ಕೆ ಬಣ್ಣ ಹಚ್ಚಿಲ್ಲ. 2007ರಲ್ಲಿ ಬಂದ 'ಶಂಕರದಾದಾ ಜಿಂದಾಬಾದ್' ಕೊನೆಯ ಸಿನಿಮಾ. ಆ ಬಳಿಕ 2009ರಲ್ಲಿ ಮಗ ರಾಮ್‌ಚರಣ್ ತೇಜಾ ಅಭಿನಯದ ಸೂಪರ್‌ಹಿಟ್ ಚಿತ್ರ 'ಮಗಧೀರ'ದಲ್ಲಿ ಒಂದು ಅತಿಥಿ ಪಾತ್ರವನ್ನಷ್ಟೇ ಮಾಡಿದ್ದರು. ನಂಬಲರ್ಹ ಮೂಲಗಳ ಪ್ರಕಾರ, ಚಿರಂಜೀವಿಯ 150ನೇ ಸಿನಿಮಾ ತೆರೆಗೆ ತರಲು ಸಿದ್ಧತೆ ನಡೆದಿದೆ. ಮಗ ರಾಮ್‌ಚರಣ್ ತೇಜಾ ಅವರೇ ಈ ಚಿತ್ರದ ನಿರ್ಮಾಪಕರಂತೆ. ಚಿರು ಜನ್ಮದಿನವಾದ ಆಗಸ್ಟ್ 22ರಂದು ಈ ಹೊಸ ಸಿನಿಮಾದ ಘೋಷಣೆ ಆಗಬಹುದು ಎನ್ನುವುದು ಅಭಿಮಾನಿಗಳ ನಿರೀಕ್ಷೆ.

'ಇನ್ನು ಮುಂದೆ ಹಾಡು– ಕುಣಿತಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ' ಎಂದು ಇತ್ತೀಚೆಗೆ ಚಿರಂಜೀವಿ ಹೇಳಿದ್ದುಂಟು. ಅದು ರಾಜಕಾರಣಿಯ ಮಾತು. ಆದರೆ ಚಿರು ಮರಳಿ ಬಣ್ಣ ಹಚ್ಚುವುದು ಖಚಿತ ಎನ್ನುತ್ತಿದೆ ಟಾಲಿವುಡ್. 59ರ ಹರೆಯದಲ್ಲೂ ಚಿರು ಆಕರ್ಷಣೆ ಮಾಸಿಲ್ಲ ಎನ್ನುವುದು ನಿಜ. ಈ ಸಿನಿಮಾದಲ್ಲಿ ಮಗ ರಾಮ್‌ಚರಣ್ ಕೂಡಾ ಒಂದು ಪಾತ್ರ ನಿರ್ವಹಿಸುವ ಸಾಧ್ಯತೆ ಇದೆಯಂತೆ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65